

## ಸಾಮಾನ್ಯವಾಗಿ ಜೂನ್, ಜುಲೈ ತಿಂಗಳುಗಳಲ್ಲಿ ಈಚಲ ಹಣ್ಣುಗಳು ಹೇರಳವಾಗಿ ಸಿಗುತ್ತವೆ.

■ ಚಿತ್ರ– ಲೇಖನ: **ಗಣಂಗೂರು ನಂಜೇಗೌಡ**

ಬೆಂಗಾಡಿನಲ್ಲೂ ಬೆಳೆಯುವ ಈಚಲ ಮರ ಬಹೂಪಯೋಗಿ. ಬಹುತೇಕ ನಗರವಾಸಿಗಳಿಗೆ ಈ ಮರದ ಹಣ್ಣು ತಿನ್ನಲು ರುಚಿಯಾಗಿರುತ್ತದೆ ಎನ್ನುವುದು ತಿಳಿದಿಲ್ಲ. ಸಿಲಿಂಡರ್ ಆಕಾರದಲ್ಲಿ ಗೋಲಿ ಗಾತ್ರದ ಈ ಹಣ್ಣನ್ನು ಬಾಯಿಗೆ ಇಟ್ಟರೆ ಬಲು ರುಚಿಕರ. ಬಣ್ಣ ಮತ್ತು ಆಕಾರದಲ್ಲಿ ಖರ್ಜೂರವನ್ನು ಹೋಲುವ ಈ ಹಣ್ಣು ಸ್ವಾದಿಷ್ಟ. ಹಳ್ಳಿಗರು ಈ ಹಣ್ಣು ಹುಡುಕಿಕೊಂಡು ಕಾಡು– ಮೇಡು ಅಲೆಯುತ್ತಾರೆ. ಇದೀಗ ಈಚಲ ಮರದಲ್ಲಿ ಹಣ್ಣು ಬಿಡುವ ಸೀಸನ್.

ಹಣ್ಣು ಬಿಡುವ ಕಾಲದಲ್ಲಿ ಮುಂಜಾನೆ ಈಚಲ ಮರದ ಬಳಿ ಹೋದರೆ ಮರದ ಬುಡದಲ್ಲಿ ಉದುರಿಬಿದ್ದ ರಸಭರಿತ ಹಣ್ಣುಗಳು ಸಿಗುತ್ತವೆ. ಅವುಗಳನ್ನು ಹೆಕ್ಕಿ, ತೊಳೆದು ತಿನ್ನುವವರೂ ಇದ್ದಾರೆ. ದನ ಕಾಯುವವರು ಮತ್ತು ಕುರಿಗಾಹಿಗಳು ಇವುಗಳನ್ನು ಚಪ್ಪರಿಸಿ ತಿನ್ನುತ್ತಾರೆ. ಹಳ್ಳಿಗಳಲ್ಲಿ ಶಾಲೆಗೆ ರಜೆ ಇದ್ದ ದಿನಗಳಲ್ಲಿ ಹುಡುಗರ ಹಿಂಡು ಈಚಲ ಮರದ ಕೆಳಗೆ ಹಣ್ಣು ಹುಡುಕುವ ದೃಶ್ಯ ಸಾಮಾನ್ಯ.

ಸಾಮಾನ್ಯವಾಗಿ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಈಚಲ ಹಣ್ಣು ಹೇರಳವಾಗಿ ಸಿಗುತ್ತವೆ. ಹೊಂಬಣ್ಣದ ಬಲಿತ ಕಾಯಿಗಳು ಮಾಗಿ ಚಾಕೊಲೇಟ್ ಬಣ್ಣಕ್ಕೆ ತಿರುಗುತ್ತಿದೆ ಎಂದರೆ ಆ ಗೊನೆ ಹಣ್ಣಿಗೆ ಬಂದಿದೆ ಎಂದೇ ಅರ್ಥ. ಅಂತಹ ಗೊನೆಯನ್ನು ಕೊಯ್ದು ಇಟ್ಟರೆ ಮೂರೇ ದಿನಕ್ಕೆ ಇಡೀ ಗೊನೆ ಹಣ್ಣಾಗುತ್ತದೆ. ಹೀಗೆ ಹಣ್ಣಾದ, ಸಿಹಿ ಮತ್ತು ಒಗರು ಮಿಶ್ರಿತ ರುಚಿಯ ಈಚಲು ಹಣ್ಣನ್ನು ವಾರದ ವರೆಗೆ ಇಟ್ಟು ತಿನ್ನಬಹುದು.

ಆದರೆ ಈಚಲು ಮರಕ್ಕೆ ಹತ್ತಿ ಗೊನೆ ಕೊಯ್ಯುವುದು ಬಲು ಸಾಹಸದ ಕೆಲಸ. ಮೈತುಂಬಾ ಮುಳ್ಳಿನಂತಹ ಹೊದಿಕೆ ಇರುವುದರಿಂದ ಮರಕ್ಕೆ ಹತ್ತುವುದು ಕಷ್ಟ. ಕೊಕ್ಕೆಯಿಂದ ಗೊನೆ ಕೊಯ್ದು ಕೆಳಕ್ಕೆ ಇಳಿಸಿ ಇಟ್ಟುಕೊಳ್ಳಬೇಕು.

ಒರಟು ಮೇಲ್ಮೈ ಹೊಂದಿರುವ ಈಚಲ ಮರ ತೆಂಗಿನ ಮರದಂತೆಯೇ ಹೊಂಬಾಳೆ ಬಿಡುತ್ತದೆ. ಹೊಂಬಾಳೆಯನ್ನು ಸೀಳಿಕೊಂಡು ಆಕರ್ಷಕ ಗೊನೆ ಈಚೆಗೆ ಬರುತ್ತದೆ. ಕುರುಚಲು ಪ್ರದೇಶದಲ್ಲಿ ಸಹಜವಾಗಿ ಬೆಳೆಯುವ ಈಚಲ ಮರಗಳು ವರ್ಷದಲ್ಲಿ ಎರಡು ಬಾರಿ ಗೊನೆ ಬಿಡುತ್ತವೆ. ಒಂದು ಗೊನೆಯಲ್ಲಿ 500ರಿಂದ 1000 ದವರೆಗೆ ಕಾಯಿಗಳಿರುತ್ತವೆ. ಒಂದು ಮರ ಒಮ್ಮೆಲೇ 8ರಿಂದ 10 ಗೊನೆ ಬಿಡುವುದು ಇದರ ಗುಣ. ಆಕರ್ಷಕ ಬಣ್ಣದ ಈಚಲ ಕಾಯಿಯ ಗೊನೆಗಳನ್ನು ನೋಡುವುದೇ ಒಂದು ಸೊಗಸು.

ಈಚಲ ಗ್ರಾಮೀಣ ಜನಜೀವನದ ಅವಿಭಾಜ್ಯ ಅಂಗವೂ ಹೌದು. ಈಚಲ ಸೋಗೆಯನ್ನು ಚಾಪೆ, ಬೀಸಣಿಗೆ ಮತ್ತು ಪೊರಕೆ ಮಾಡಲು ಬಳಸಲಾಗುತ್ತದೆ. ಗರಿಯ ಕಾಂಡವನ್ನು ಸೀಳಿ ಬುಟ್ಟಿ ಹೆಣೆಯುವವರೂ ಇದ್ದಾರೆ. ಆದರೆ ಇತ್ತೀಚೆಗೆ ಈ ಕಸುಬು ಗ್ರಾಮೀಣ ಪ್ರದೇಶದಿಂದ ಕಣ್ಮರೆಯಾಗುತ್ತಿದೆ. ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ದಾಳಿಯಿಂದಾಗಿ ಹೆಣಿಗೆಯ ಈಚಲ ಬುಟ್ಟಿಗಳು ಬೇಡಿಕೆ ಕಳೆದುಕೊಂಡಿವೆ. ಬೇಕೆಂದರೂ ಕಾಣಸಿಗುತ್ತಿಲ್ಲ.

ಹೊಸದಾಗಿ ನೆಡುವ ಸಸಿಗಳ ರಕ್ಷಣೆಗಾಗಿ ಈಚಲು–ಸೋಗೆಯಲ್ಲಿ ಮುಳ್ಳು ಇರುವುದರಿಂದ–ಗರಿಯನ್ನು ಕಟ್ಟಿ ದನ, ಕುರಿ, ಮೇಕೆಗಳು ತಿನ್ನದಂತೆ ರಕ್ಷಿಸುತ್ತಾರೆ. ಕಾಡಂಚಿನ ಜನರು ತಮ್ಮ ಜೋಪಡಿಗಳಿಗೆ ಈಗಲೂ ಈ ಗರಿಗಳನ್ನೇ ಹೆಚ್ಚು ಬಳಸುವವರಿದ್ದಾರೆ.

ನಮ್ಮ ಜನಪದ ಸಾಹಿತ್ಯದಲ್ಲಿ ಈಚಲಮರಕ್ಕೆ ವಿಶಿಷ್ಟ ಸ್ಥಾನವಿದೆ. ಈಚಲ ಮರದ ಬಗ್ಗೆ ವಿಭಿನ್ನ ಗಾದೆ ಮಾತುಗಳೂ ಚಾಲ್ತಿಯಲ್ಲಿವೆ. 'ಈಚಲ ಮರದ ಕೆಳಗೆ ಕುಳಿತು ಮಜ್ಜಿಗೆ ಕುಡಿದರೂ ಹೆಂಡ ಕುಡಿದಂತೆಯೇ' ಎನ್ನುವುದು ಅವುಗಳಲ್ಲಿ ಹೆಚ್ಚು ಜನಪ್ರಿಯವಾದದ್ದು. ಹೆಂಡ ಈಗಲೂ ಗ್ರಾಮೀಣರ ದಿನನಿತ್ಯದ ಆಹಾರದಂತೆಯೇ ಇರುವುದರಿಂದ ಈ ಗಾದೆಮಾತು ಹೆಚ್ಚು ಜನಬಳಕೆಯಲ್ಲಿದೆ ಎನ್ನಬಹುದು.

ವೈನ್‌ಶಾಪ್‌ಗಳು ಇತ್ತೀಚೆಗೆ ಹಳ್ಳಿ ಹಳ್ಳಿಗಳಲ್ಲೂ ತಲೆ ಎತ್ತಿರುವುದರಿಂದ ಹೆಂಡ ಇಳಿಸುವ ಸಾಂಪ್ರದಾಯಕ ಕಸುಬಿನವರೂ ಕಣ್ಮರೆಯಾಗುತ್ತಿದ್ದಾರೆ. ಅದೂ ಅಲ್ಲದೆ ಹಿಂದಿನಂತೆ ಶುದ್ಧ ಹೆಂಡವೂ ಸಿಗುತ್ತಿಲ್ಲ. ಅದರಲ್ಲೂ ಕಲಬೆರಕೆ ಹೆಚ್ಚಾಗಿದೆ. ಈಚಲ ಮರದ ಕುರಿತು ಹೀಗೆ ಇರುವ ಗಾದೆ ಮಾತುಗಳು ಒಂದೆರಡಲ್ಲ. 'ಅನೀತಿವಂತರ ನೆರಳಿಗಿಂತ ಈಚಲ ಮರದ ನೆರಳೇ ಲೇಸು' ಎನ್ನುವುದು ಇನ್ನೊಂದು ಮಾತು. 'ಆಚಾರ ಬಲ್ಲುದೇ ಈಚಲ ಮರ' ಮತ್ತು 'ಈ ಛಲವಾದಿಗೆ ಈಚಲವೇ ಗತಿ' ಇತ್ಯಾದಿ ಗಾದೆಮಾತುಗಳೂ ರೂಢಿಯಲ್ಲಿವೆ. ●